ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ನಗರ ಪ್ರದೇಶಗಳಲ್ಲಿ ಅಳತೆ ಮೀರಿ ಹೆಚ್ಚಿರುವ ಅನಧಿಕೃತ ನಿರ್ಮಾಣಗಳಿಂದಾಗಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಹಾಗೂ ಇತರ ಸ್ಥಳೀಯ ಪ್ರಾಧಿಕಾರಗಳಿಗೆ ಮನೆ ನಿವೇಶನಗಳಿಗಾಗಿ ಹೆಚ್ಚುತ್ತಿರುವ ಬೇಡಿಕೆಯನ್ನು ಪೂರೈಸುವುದು ಕಷ್ಟವಾಗುತ್ತಿದೆ. ಹಲವಾರು ವರ್ಷಗಳ ಅವಧಿಯಲ್ಲಿ ಈಗಾಗಲೇ ನಿರ್ಮಿಸಿರುವ ಅನಧಿಕೃತ ನಿರ್ಮಾಣಗಳನ್ನು ಕೆಡಹುವುದು ಸಾಧ್ಯವಿಲ್ಲ ಮತ್ತು ಸಾರಾಸಗಟು ಕೆಡಹುಕೆಯಿಂದ ರಾಷ್ಟ್ರೀಯ ಸಂಪತ್ತಿನ ಹಾನಿ ಮಾತ್ರವಲ್ಲ ಕೆಲವು ಸಂದರ್ಭಗಳಲ್ಲಿ ಕಾನೂನು ಮತ್ತು ಸುವ್ಯವಸ್ಥೆಯ ಸಮಸ್ಯೆಗಳು ಉದ್ಭವಿಸಬಹುದಾಗಿದೆ ಮೇಲಿನ ಅಂಶಗಳನ್ನು ದೃಷ್ಟಿಯಲ್ಲಿರಿಸಿಕೊಂಡು ಕೆಲವೊಂದು ರೀತಿಯ ಅನಧಿಕೃತ ನಿರ್ಮಾಣಗಳನ್ನು ಸಕ್ರಮಗೊಳಿಸುವುದಕ್ಕಾಗಿ ಒಂದು ಸಮಗ್ರ ಶಾಸನವನ್ನು ರಚಿಸುವುದು ಅಗತ್ಯವೆಂದು ಭಾವಿಸಲಾಯಿತು.

ಆದ್ದರಿಂದ ವಿಧೇಯಕ.

ಆರ್ಥಿಕ ಜ್ಞಾಪನಪತ್ರ

ರಚಿಸಲು ಉದ್ದೇಶಿಸಲಾಗಿರುವ ಪರಿಶೋಧನಾ ಸಮಿತಿಯ ಎಲ್ಲ ಸದಸ್ಯರು ಅಧಿಕಾರಿಗಳಾಗಿರುತ್ತಾರೆ ಅಲ್ಲದೆ ಈಗಿರುವ ಅಧಿಕಾರಿಗಳು ಈ ಉದ್ದೇಶಿತ ಅಧಿನಿಯಮದ ಉಪಬಂಧಗಳನ್ನು ಕಾರ್ಯಗತಗೊಳಿಸುತ್ತಾರೆ. ಆದ್ದರಿಂದ ಆರ್ಥಿಕ ಹೊರೆ ಬೀಳುವುದಿಲ್ಲ.

ಪ್ರತ್ಯಾಯೋಚಿತ ಶಾಸನರಚನಾಧಿಕಾರ ಕುರಿತು ಜ್ಞಾಪನಪತ್ರ

ಖಂಡ 3

ಈ ಖಂಡವು ಅನಧಿಕೃತ ನಿರ್ಮಾಣಗಳನ್ನು ಸಕ್ರಮಗೊಳಿಸುವುದಕ್ಕೆ ಸಂಬಂಧ ಪಟ್ಟಂತೆ ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರ ನೀಡುತ್ತದೆ.

ಖಂಡ 6

6ನೇ ಖಂಡದ (4)ನೇ ಉಪ ಖಂಡವು ನಿರ್ಮಾಣಗಳಿಗೆ ಸೇರಿದ ಭೂಮಿಯನ್ನು ನೀಡಬಹುದಾದ ಬಗ್ಗೆ ಗರಿಷ್ಠ ಪ್ರಮಾಣವನ್ನು ನಿಯಮಗಳ ಮೂಲಕ ನಿಗಧಿಪಡಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರ ನೀಡುತ್ತದೆ.

ಖಂಡ 7

7ನೇ ಖಂಡದ (1) ನೇ ಉಪಖಂಡವು ಅನಧಿಕೃತ ನಿರ್ಮಾಣಗಳನ್ನು ಸಕ್ರಮ ಗೊಳಿಸುವುದಕ್ಕಾಗಿ ಸಂದಾಯ ಮಾಡಬಹುದಾದ ಮೊಬಲಗಳನ್ನು ನಿಯಮಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರ ನೀಡುತ್ತದೆ.

ಖಂಡ 9

ಈ ಖಂಡವು ಅಧಿನಿಯಮದ ಉದ್ದೇಶಗಳನ್ನು ನೆರೆವೇರಿಸುವುದಕ್ಕಾಗಿ ಸಾಮಾನ್ಯ ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರ ನೀಡುತ್ತದೆ.

ಪ್ರಸ್ತಾವಿತ ಪ್ರತ್ಯಾಯೋಜಿತ ಶಾಸನ ರಚನಾಧಿಕಾರವು ವಾಡಿಕೆಯ ಸ್ವರೂಪದ್ದಾಗಿರುತ್ತದೆ.

ಕೆ.ಜೆ. ಜಾರ್ಜ್
ವಸತಿ ಮತ್ತು ನಗರಾಭಿವೃದ್ಧಿ ಸಚಿವರು

ಎಂ ಶ್ರೀನಿವಾಸಪ್ಪ
ಕಾರ್ಯದರ್ಶಿ